ತನ್ನ ತಾಯಿಯೊಂದಿಗೆ ವೇದಿಕೆಗೆ ಬರಲು ಓಣಿಗೆ ಬಂದಾಗ ಪ್ರೇಕ್ಷಕರು ಸಾಮೂಹಿಕವಾಗಿ 'ಓ...' ಎಂದು ಹರ್ಷಧ್ವನಿಯನ್ನು ವ್ಯಕ್ತಪಡಿಸಿದರು. ನಂತರ ನಾನು ನನ್ನ ಸಹೋದರ ಜಾರ್ಜ್‌ನ ಕೈಹಿಡಿದು ವೇದಿಕೆಯೆಡೆಗೆ ಮುಂದುವರಿದೆ. ಪ್ರೇಕ್ಷಕರು ಮತ್ತೊಮ್ಮೆ ಸಾಮೂಹಿಕವಾಗಿ ಹರ್ಷಧ್ವನಿಯನ್ನು ವ್ಯಕ್ತಪಡಿಸಿದರು. ದೃಶ್ಯ ಜನರನ್ನು ಭಾವುಕಗೊಳಿಸುತ್ತಿತ್ತು. ಎಲ್ಲರೂ ನನ್ನನ್ನು ಸುಂದರ ವಧುವೆಂದು ಹೇಳುತ್ತಿದ್ದರು. ನನ್ನ ಸಂತಸಕ್ಕೆ ಎಲ್ಲೆಯೇ ಇರಲಿಲ್ಲ. ನಾನು ಬಿಳಿಯ ಗೌನ್ ಧರಿಸಿದ್ದೆ. ತಲೆಯ ಮೇಲೆ ಹೂವುಗಳ ಮಾಲೆಯಿತ್ತು. ನಾನು ವೇದಿಕೆಗೆ ಹೋದಾಗ ಚಚ್ಚೌಕದ ರೇಷ್ಮೆಯ ಮುಸುಕನ್ನು ಮಾರ್ಕೋ ಮತ್ತು ನನ್ನ ತಲೆಯ ಮೇಲೆ ಹಾಕಲಾಯಿತು. ಸಂಪೂರ್ಣ ಪದ್ಧತಿ ಮುಗಿಯುವವರೆಗೆ ನಮ್ಮ ತಲೆಗಳ ಮೇಲೆ ಆ ಮುಸುಕಿದ್ದು, ಅದು ಪದೇ ಪದೇ ಜಾರುತ್ತಿತ್ತು. ನಮ್ಮ ಸಮೀಪದಲ್ಲಿ ಆಶ್ಚರ್ಯದಿಂದ ನಿಂತಿದ್ದ ಬ್ರೈಡ್ ಗರ್ಲ್ ಮತ್ತು ಗ್ರೂಮ್ ಬಾಯ್ ಆ ಮುಸುಕು ನಮ್ಮ ತಲೆಗಳಿಂದ ಜಾರದಂತೆ ನೋಡಿಕೊಳ್ಳುತ್ತಿದ್ದರು. ಕಡೆಗೆ ಪಾದರಿಗಳು ನಮ್ಮಿಬ್ಬರ ತಲೆಯ ಮೇಲಿನಿಂದ ಮುಸುಕನ್ನು ಎಳೆದರು; ನಮ್ಮ ಸಮಸ್ತ ದೋಷಗಳು ಕೊನೆಗೊಂಡವು ಎಂಬುದು ಇದರ ಪ್ರತೀಕವಾಗಿತ್ತು.

ನಾವು ವೈವಾಹಿಕ ಜೀವನದಲ್ಲಿ ಬಂಧಿಸಲ್ಪಟ್ಟೆವು. ಅಭಿನಂದನೆಗಳು, ಶುಭಕಾಮನೆಗಳು ಮತ್ತು ಆಶೀರ್ವಾದಗಳು ಮಳೆಗರೆದವು. ನಮ್ಮ ಮೇಲೆ ಹೂವುಗಳು ಮತ್ತು ಬಣ್ಣ ಬಣ್ಣದ ಕಾಗದದ ತುಂಡುಗಳು ಸಹ ಮಳೆಗರೆದವು. ರೇಚಲ್ ನನ್ನನ್ನು ಚುಂಬಿಸಿದಳು. ಅವಳು ತುಂಬಿದ ಕಣ್ಣುಗಳಿಂದ, ಇನ್ನು ನಿನ್ನ ಜೀವನದಲ್ಲಿ ಎಲ್ಲವೂ ಒಳಿತಾಗುವುದು ಎಂದಳು. ನಾನು ಮತ್ತು ಮಾರ್ಕೋ ಓಣಿಯ ಇನ್ನೊಂದೆಡೆಗೆ ಹೋದೆವು. ಒಂದು ಪಾರಂಪರಿಕ, ವಿಶಾಲ ಮತ್ತು ಪಿರಾಮಿಡ್ ಆಕಾರದ ಕೇಕನ್ನು ಗಾಜಿನ ಆವರಣದಲ್ಲಿಡಲಾಗಿತ್ತು.

ಗಾಜಿನ ಆವರಣವನ್ನು ತೆಗೆಯಲಾಯಿತು. ಮುಂದಿನ ಪದ್ಧತಿ ಕುತೂಹಲಕಾರಿಯಾಗಿತ್ತು; ಒಂದು ವೇಳೆ ವರ ಮತ್ತು ವಧು ಕೇಕ್ ಮೇಲ್ಭಾಗದಲ್ಲಿ ಕೇಕ್‌ಗೆ ತಾಗದೆ ಪರಸ್ಪರ ಚುಂಬಿಸಿಕೊಂಡರೆ, ಅವರ ಜೀವನ ಸದಾ ಸುಖವಾಗಿರುವುದು, ಜೀವನದಲ್ಲಿ ಸಮೃದ್ಧಿಯಾಗುವುದು ಎಂಬ ನಂಬಿಕೆಯಿತ್ತು. ನಾನು ಮತ್ತು ಮಾರ್ಕೋ ಪರಸ್ಪರ ಚುಂಬಿಸುವಾಗ ಕೇಕ್‌ಗೆ ತಾಗಬಾರದೆಂದು ತುಂಬಾ ಪ್ರಯತ್ನಿಸಿದೆವು, ಆದರೆ ನಾನು ತಾಗಿದೆ. ಸುತ್ತಮುತ್ತಲಿನಿಂದ ವಿಷಾದದ ಧ್ವನಿಗಳು ಬಂದವು. ಕೆಲವರು ನಮಗೆ, ಚಿಂತಿಸಬೇಕಿಲ್ಲ, ಇದೊಂದು ಪರಂಪರೆಯಷ್ಟೆ, ವಾಸ್ತವಿಕತೆಗೂ ಇದಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಸಮಾಧಾನ ಹೇಳಿದರು.

ಈ ಪದ್ಧತಿಯನ್ನು ನಾನು ಮತ್ತೊಮ್ಮೆ ಮಾಡಲು ಬಯಸುತ್ತೇನೆ, ನನಗೆ ನನ್ನ ಜೀವನದಲ್ಲಿ ಎಲ್ಲವೂ ಒಳ್ಳೆಯದು ಬೇಕು ಎಂದು ಮಾರ್ಕೋ ಹೇಳಿದ. ಎಲ್ಲರೂ ಪಾದರಿಯವರನ್ನು ನೋಡಿದರು. ಪಾದರಿಗಳು, ಯಾವುದೇ ಪದ್ಧತಿಯನ್ನು ಪುನರಾವರ್ತನೆ ಮಾಡಲಾಗದು ಎಂದರು. ಮಾರ್ಕೋ ಪಾದರಿಗಳಿಗೆ ಎದುರುತ್ತರ ಕೊಡಲಿಲ್ಲ. ಆದರೆ ಅವನ ಸಿಟ್ಟಿನ ಮುಖವನ್ನು ನಾನು ಅರ್ಥ ಮಾಡಿಕೊಳ್ಳುತ್ತಿದ್ದೆ, ನಾನು ಅವನನ್ನು, 'ಮಾರ್ಕೋ, ಇಷ್ಟು ಮೂಢನಂಬಿಕೆ ಬೇಡ' ಎಂದು ತಡೆದೆ.

ಯಾರೋ ಒಬ್ಬರು, 'ಮಾರ್ಕೋನ ಅಜ್ಜಿ ಪೋಲೆಂಡಿನವರಾಗಿದ್ದರು, ಅಲ್ಲಿ ವಧು ತಮ್ಮೆಲ್ಲಾ ಅತ್ತೆಯವರೊಂದಿಗೆ ನೃತ್ಯಿಸುವ ಪರಂಪರೆಯಿದೆ' ಎಂದರು. ಅಜ್ಜಿಯ ದೇಶದ ಪರಂಪರೆಯನ್ನೂ ಎಳೆದು ತರಲಾಯಿತು. ನನಗೆ ಡ್ಯಾನ್ಸ್ ಬರುತ್ತಿದ್ದು, ಡ್ಯಾನ್ಸ್ ಮಾಡುವುದು ನನಗಿಷ್ಟವಾಗಿತ್ತು.

'ನನಗೂ ಡ್ಯಾನ್ಸ್ ಮಾಡುವುದು ತುಂಬಾ ಇಷ್ಟ' ಎಂದ ಪಾಲ್.

ನಾನು ಮೊದಲು ಮಾರ್ಕೋನ ತಂದೆ ಬರ್ನಾರ್ಡ್‌ರೊಂದಿಗೆ ನೃತ್ಯಿಸಿದೆ, ನಂತರ ಒಬ್ಬೊಬ್ಬರಂತೆ ಅವನ ಮನೆಯವರೊಂದಿಗೆ ನೃತ್ಯಿಸಿದೆ. ಕೊನೆಯಲ್ಲಿ ನನಗೆ ಉಸಿರು ಕಟ್ಟಿದಂತಾಯಿತು, ನಾನು ತುಂಬಾ ದಣಿದೆ. ನಾನು ಯುವತಿ ಅಥವಾ ಕಡಿಮೆ ವಯಸ್ಸಿನ ವಧುವಾಗಿರಲಿಲ್ಲ, ನಲ್ವತ್ತನ್ನು ಮುಟ್ಟುತ್ತಿದ್ದೆ.

ಬೆಳಿಗ್ಗೆ ವಿವಾಹದ ಆಚರಣೆಗಳು ಆರಂಭವಾಗಿದ್ದವು. ರಿಸೆಪ್ಶನ್ ಇತ್ಯಾದಿಗಳಿಂದ ಮುಕ್ತರಾಗಿ ಮನೆಗೆ ಹೋಗುವಾಗ ರಾತ್ರಿಯ ಹನ್ನೊಂದು ಗಂಟೆಯಾಗಿತ್ತು. ಬಟ್ಟೆಗಳನ್ನು ಬದಲಿಸಿ ಹಾಸಿಗೆಯಲ್ಲಿ ಮಲಗಿದೆವು, ಆಗಲೇ ತೀವ್ರ ಬಡಿತದಿಂದ ಬಾಗಿಲನ್ನು ತಟ್ಟಿದ ಶಬ್ದವಾಯಿತು. ನಾನು ಗಾಬರಿಗೊಂಡೆ. ಮಾರ್ಕೋ ಎದ್ದು ಹೋಗಿ ಬಾಗಿಲನ್ನು ತೆರೆದ; ಅವನ ಕಸಿನ್ಸ್ ಮತ್ತು ಕೆಲವು ಸ್ನೇಹಿತರು, ಹೀಗೆ ಒಟ್ಟು ಎಂಟು ಜನ ಬಾಗಿಲ ಬಳಿ ನಿಂತಿದ್ದರು. ಬಾಗಿಲು ತೆರೆಯುತ್ತಲೇ ಎಲ್ಲರೂ ಒಳಗೆ ಬಂದರು. ಈಗ ಇನ್ನೂಂದು ಪದ್ಧತಿ ಉಳಿದಿತ್ತು. ಸಂಪ್ರದಾಯದಂತೆ ಅವರೆಲ್ಲರೂ ಭೋಜನದ ಬೇಡಿಕೆಯನ್ನಿಟ್ಟರು. ನಾನು ಹಾಸಿಗೆಯಲ್ಲಿಯೇ ಮಲಗಿದ್ದೆ. ಮಾರ್ಕೋ ನನ್ನ ಬಳಿಗೆ ಬಂದ.

'ಈಗ ಇವರಿಗೇನು ಬೇಕು?' ದಣಿದಿದ್ದ ನಾನು ಪ್ರಶ್ನಿಸಿದೆ.

'ಇವರಿಗೆ ಏನಾದರೂ ತಿನ್ನಲು ಕೊಡು, ಆಗಲೇ ಇವರು ನಮ್ಮನ್ನು ಒಂಟಿಯಾಗಿರಲು ಬಿಡುತ್ತಾರೆ' ಎಂದ ಮಾರ್ಕೋ.

'ಮನೆಯಲ್ಲಂತೂ ಏನೂ ಇಲ್ಲ. ಈಗ ಏನು ಕೊಡುವುದು?'

'ನಾವು ಮನೆಯಲ್ಲಿ ಕೆಲವು ಸ್ನ್ಯಾಕ್ಸ್ ಮತ್ತು ವೈನ್–ಬೀರ್ ಬಾಟಲಿಗಳನ್ನು ತಂದಿಟ್ಟುಕೊಳ್ಳಬೇಕಿತ್ತು' ಮಾರ್ಕೋ ಹೇಳಿದ, 'ನಾನು ಏನೇನು ಅಂತ ನೋಡಲಿ? ಇಲ್ಲಿ ಎಲ್ಲಾ ವ್ಯವಸ್ಥೆಯನ್ನೂ ನಾನೊಬ್ಬನೇ ಮಾಡಬೇಕಿದೆ.'

'ಸುಮ್ಮನೆ ಕೋರ್ಟ್ ಮ್ಯಾರೇಜ್ ಮಾಡಿಕೊಳ್ಳೋಣವೆಂದು ನಾನು ಮೊದಲಿನಿಂದಲೂ ಹೇಳ್ತಿದ್ದೆ. ನಿಮಗೇ ಈ ಎಲ್ಲಾ ವೈಭವ ಬೇಕಾಗಿತ್ತು' ನಾನೂ ಗುರುಗುಟ್ಟಿದೆ.

'ಓಹ್, ವಿವಾಹದ ರಾತ್ರಿಯಿಂದಲೇ ಜಗಳ ಪ್ರಾರಂಭವಾಯ್ತು?'

'ಹೌದು ಪಾಲ್, ಮದುವೆಯಾದ ರಾತ್ರಿಯಿಂದಲೇ ನಮ್ಮ ಜಗಳ ಆರಂಭವಾಗಿತ್ತು.'

ಕಸಿನ್ಸ್ ಮತ್ತು ಮಿತ್ರರು ಕಿಚನ್ನಿನ ಅಲ್ಮಾರಿನಿಂದ ಖಾಲಿ ಗ್ಲಾಸ್–ಪ್ಲೇಟುಗಳು ಮತ್ತು ಚಮಚಗಳನ್ನು ತೆಗೆದುಕೊಂಡು, ಅವುಗಳನ್ನು ಬಡಿದು ಬಡಿದು ಊಟಕ್ಕೆ ಬೇಡಿಕೆ ಸಲ್ಲಿಸುತ್ತಿದ್ದರು. ಅದೃಷ್ಟವೆಂಬಂತೆ ರೇಚಲ್ ಮತ್ತು ಜಾರ್ಜ್ ನಮ್ಮ ಬಿಲ್ಡಿಂಗ್‌ನ ಗೆಸ್ಟ್ ಹೌಸಿನಲ್ಲಿ ಉಳಿದಿದ್ದರು. ನಾನು ಅವರಿಗೆ ಫೋನ್ ಮಾಡಿ ಕರೆಸಿದೆ. ಅವರು ಬಂದು ಪರಿಸ್ಥಿತಿಯನ್ನು ಹದ್ದುಬಸ್ತಿಗೆ ತಂದರು. ಜಾರ್ಜ್ ತನ್ನೊಂದಿಗೆ ಎರಡು ವೈನ್ ಬಾಟ್ಲಿಗಳನ್ನು ತಂದಿದ್ದ. ರೇಚಲ್ ಎಲ್ಲರಿಗೂ, ನಾನೀಗ ಅರಬ್ಬೀ ಕಾಫಿ ಮಾಡುತ್ತೇನೆ, ಕೇರಳದ ಪ್ರಸಿದ್ಧ ಪ್ಯಾನ್‌ಕೇಕ್, ಅಪ್ಪಮ್ ಸುಡುತ್ತೇನೆ ಎಂದಳು. ಇದಕ್ಕೆ ಎಲ್ಲರೂ ಒಪ್ಪಿದರು. ಅಂದು ರೇಚಲ್ ರಾತ್ರಿ ವೇಳೆಗೆ ಕಾಫಿ ಮಾಡಬೇಕಾಯಿತು, ಕಾವಲಿಯ ಮೇಲೆ, ಅಕ್ಕಿ ಮತ್ತು ತೆಂಗಿನಿಂದಾದ ಪ್ಯಾನ್‌ಕೇಕ್ ಸುಡಬೇಕಾಯಿತು. ನಾನು ಮತ್ತು ಮಾರ್ಕೋ ಇಬ್ಬರೂ ಅವಳಿಗೆ ಸಹಾಯ ಮಾಡಬೇಕಾಯಿತು. ಎಲ್ಲರೂ ತೃಪ್ತಿಯಿಂದ ವೈನ್ ಕುಡಿದು, ಪ್ಯಾನ್‌ಕೇಕ್‌ಗಳನ್ನು ತಿಂದು ಹೊರಟುಹೋದರು.

ಅವರು ರೇಚಲ್‌ಗೆ ಅನೇಕ ಬಾರಿ ಧನ್ಯವಾದಗಳನ್ನು ಹೇಳಿದರು. ನಮ್ಮ ವೈವಾಹಿಕ ಜೀವನಕ್ಕೆ ಶುಭವನ್ನು ಕೋರಿದರು. ರೇಚಲ್ ಮತ್ತು ಜಾರ್ಜ್ ಸಹ ಹೊರಟುಹೋದರು. ನಾನು ಮತ್ತು ಮಾರ್ಕೋ ಒಂಟಿಯಾಗಿ ಉಳಿದೆವು. ಇದು ನಮ್ಮ ಪ್ರಥಮರಾತ್ರಿಯಾಗಿತ್ತು, ನಾನು ಅದನ್ನು ಕಳೆದುಕೊಳ್ಳಲು ಬಯಸುತ್ತಿರಲಿಲ್ಲ. ನಾನು ಮಾರ್ಕೋಗೆ 'ಸ್ಸಾರಿ' ಮತ್ತು 'ಥ್ಯಾಂಕ್ ಯೂ' ಎರಡೂ ಹೇಳಿದೆ. ನಂತರ ಅವನನ್ನು ಅಪ್ಪಿಕೊಂಡು ಹೇಳಿದೆ, 'ನಿಮ್ಮ ಮನಸ್ಸಿಗೆ ನನ್ನಿಂದ ಬೇಸರವಾಗಿದ್ದರೆ ಸ್ಸಾರಿ ಕ್ಯೂಟೀಪಾಯಿ.'

ಮಾರ್ಕೋ ಕತ್ತಲು ಕೋಣೆಯಲ್ಲಿ ಗಟ್ಟಿಯಾಗಿ ನಕ್ಕು, ನನ್ನನ್ನು ಬಿಗಿಯಾಗಿ ಅಪ್ಪಿದ. ಆಯಾಸ, ಸಂವೇದನೆಗಳು, ಮದ್ಯದ ಅಮಲು... ನಿದ್ರಾದೇವಿ ನಮ್ಮನ್ನು ತನ್ನ ಮಡಿಲಿಗೆ ತೆಗೆದುಕೊಂಡಳು. ಅಂದು ರಾತ್ರಿ ನಾವು ಹೀಗೆಯೇ ನಿದ್ರಿಸಿದೆವು.

ನನ್ನ ಪ್ರತಿಯೊಂದು ವಿವಾಹದ ನಂತರ ನಾನು ನನ್ನ ಪತಿಯ ಸರ್‌ನೇಮ್ ಇಟ್ಟುಕೊಂಡಿದ್ದೆ. ನ್ಯಾನ್ಸಿ ಮ್ಯಾಥ್ಯೂ, ನ್ಯಾನ್ಸಿ ಕೊಕ್ಕನ್, ನ್ಯಾನ್ಸಿ ಹೈನಸನ್, ಮತ್ತೆ ನ್ಯಾನ್ಸಿ ಮ್ಯಾಥ್ಯೂ, ಈಗ ನ್ಯಾನ್ಸಿ ಲೆರಾಯ್. ಅದೆಷ್ಟೋ ಸರನೇಮ್‌ಗಳು ನನ್ನ ಹೆಸರಿನ ಮುಂದೆ ಬಂದುಹೋಗುತ್ತಿದ್ದವು. ನಾನಾ ಸ್ವಭಾವದ ವ್ಯಕ್ತಿಗಳೊಂದಿಗೆ ನನ್ನ ಸಂಬಂಧ ಬೆಳೆಯಿತು. ಪ್ರತಿಯೊಂದು ಸಂಬಂಧದ ಧರ್ಮವನ್ನು ಪಾಲಿಸಲು ಹಾಗೂ ಓರ್ವ ಸೊಸೆಯಾಗಿ ಅತ್ತೆ–ಮಾವನೊಂದಿಗೂ ಮಧುರ ಸಂಬಂಧವನ್ನಿಟ್ಟುಕೊಳ್ಳಲು ಸದಾ ಪ್ರಯತ್ನಿಸಿದೆ. ಪಾಲ್, ಈಗ ನಿಮ್ಮನ್ನು ಫ್ರಾನ್ಸ್‌ಗೆ ಕರೆದುಕೊಂಡು ಹೋಗುತ್ತೇನೆ...

(ಸಶೇಷ)